ದಿನಾಂಕಃ 26.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1ನೇ ಎದುರುದಾರರ ಪರ ವಕೀಲರಿಂದ :**

ನಾನು 9ನೇ ತರಗತಿಯವರೆಗೆ ಓದಿರುತ್ತೇನೆ. ಮೃತ ಪುಟ್ಟತಾಯಮ್ಮ ನನ್ನ ತಾಯಿ. ನನ್ನ ತಾಯಿಗೆ ನಿಪಿ-6 ರಲ್ಲಿ ಹೇಳಿರುವಷ್ಟು ವಯಸ್ಸಾಗಿರುತ್ತದೆ ಎಂದರೆ ಸರಿ. ನನ್ನ ತಾಯಿಗೆ ನಾನು ಒಬ್ಬ ಮಗನಾಗಿದ್ದು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಾಯಿಯವರಿಗೆ ಅವರು 20 ವರ್ಷ ವಯಸ್ಸಾಗುವುದಕ್ಕೂ ಮುಂಚೆ ಮದುವೆಯಾಗಿತ್ತು.

**2.** ನನ್ನ ತಂಗಿಯರಿಗೆ ಮದುವೆಯಾಗಿದ್ದು ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ನನ್ನ ತಂದೆಯವರು ಮೃತಪಟ್ಟಿದ್ದು, ನಾನು ಮತ್ತು ನನ್ನ ತಾಯಿ ಒಟ್ಟಿಗೆ ವಾಸವಿದ್ದೆವು. ನನ್ನ ತಾಯಿಗೆ ಅರ್ಜಿದಾರರು ಮಾತ್ರ ವಾರಸುದಾರರು ಎಂದು ತೋರಿಸಲು ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ.

**3.** ನನ್ನ ತಾಯಿಗೆ 70 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸುಳ್ಳು. ನನ್ನ ತಾಯಿಗೆ ವಯಸ್ಸಾದ ಕಾರಣ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸಾಕ್ಷಿ ಅವರು ಹಸುಗಳನ್ನು ನೋಡಿಕೊಳ್ಳುತ್ತಿದ್ದರು, ಗದ್ದಗೆ ಹೋಗುತ್ತಿದ್ದರು ಎನ್ನುತ್ತಾರೆ. ಸಾಮಾನ್ಯವಾಗಿ ವಯಸ್ಸಾದವರು ಕೆಲಸ ಮಾಡುವುದಿಲ್ಲ, ಅವರ ಮಕ್ಕಳು-ಮೊಮ್ಮಕ್ಕಳು ಮನೆ ಕೆಲಸವನ್ನು ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ವಯಸ್ಸಾದವರಿಗೆ ವಯೋಸಹಜ ಖಾಯಿಲೆಗಳು ಬರುತ್ತವೆ ಎಂದರೆ ಅವರಿಗೆ ಆ ರೀತಿ ಇರಲಿಲ್ಲ ಎನ್ನುತ್ತಾರೆ. ನನ್ನ ತಾಯಿಗೆ ಮೆಟ್ಟಿಲು ಹತ್ತಲು ಆಗುತ್ತಿರಲಿಲ್ಲ, ಬೇರೆಯವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸುಳ್ಳು.

**4.** ಅಪಘಾತವನ್ನು ನಾನು ನೇರವಾಗಿ ನೋಡಿಲ್ಲ. ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ನನಗೆ ನೇರವಾಗಿ ಗೊತ್ತಿಲ್ಲ. ಆ ಕಾರಣದಿಂದ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಬೇರೆಯವರು ಹೇಳಿರುತ್ತಾರೆ. ಎನ್ನುತ್ತಾರೆ. ಎರಡೂ ಬಸ್ಸುಗಳ ಇಂಜಿನ್ ಚಾಲನೆಯಲ್ಲಿರಲಿಲ್ಲ ಎಂದರೆ ಒಂದು ಇಂಜಿನ್ ಚಾಲನೆಯಲ್ಲಿತ್ತು ಎನ್ನುತ್ತಾರೆ. ಎರಡೂ ವಾಹನಗಳು ಚಾಲನೆಯಲ್ಲಿ ಇಲ್ಲದ ಕಾರಣ ಅತಿವೇಗ, ಅಜಾಗರೂಕತೆ ಬರುವುದಿಲ್ಲ ಎಂದರೆ ಸಾಕ್ಷಿ ಹಿಮ್ಮುಖವಾಗಿ ಬಸ್ ಚಾಲನೆಯಾಗಿದ್ದು, ಎರಡೂ ವಾಹನಗಳ ಮಧ್ಯೆ ಸಿಲುಕಿ ನನ್ನ ತಾಯಿ ಮೃತಪಟ್ಟಿರುತ್ತಾರೆ ಎನ್ನುತ್ತಾರೆ. ಒಂದು ಫ್ಲಾಟ್ ಫಾರಂ ಹಾಗೂ ಇನ್ನೊಂದು ಫ್ಲಾಟ್ ಫಾರಂ ನಡುವೆ ಸುಮಾರು 6 ಅಡಿ ಅಂತರವಿರುತ್ತದೆ ಎಂದರೆ ಗೊತ್ತಿಲ್ಲ. ಸರ್ಕಾರದ ಶಕ್ತಿ ಯೋಜನೆಯಡಿಯಲ್ಲಿ ನನ್ನ ತಾಯಿ ಆ ದಿನ ಪ್ರಯಾಣಕ್ಕೆ ಹೋಗಿದ್ದರು ಎಂದರೆ ಸರಿ. ಆ ಕಾರಣದಿಂದ ಬಸ್ಸುಗಳಲ್ಲಿ ಹೆಚ್ಚು ಜನ ಪ್ರಯಾಣ ಮಾಡುತ್ತಿದ್ದರು ಎಂದರೆ ಸಾಕ್ಷಿ ಆ ಸಮಯದಲ್ಲಿ ಅಷ್ಟೊಂದು ಜನ ಪ್ರಯಾಣಿಸುತ್ತಿರಲಿಲ್ಲ ಎನ್ನುತ್ತಾರೆ. ಆ ದಿನ ಹಬ್ಬವಿದ್ದ ಕಾರಣ ಕಡಿಮೆ ಬಸ್ಸುಗಳು ಇದ್ದ ಕಾರಣ ಜನರ ನಡುವೆ ಬಸ್ ಹತ್ತಲು ನೂಕಾಟ ಆಗಿರುತ್ತದೆ ಎಂದರೆ ಸರಿಯಲ್ಲ. ಬಸ್ಸುಗಳ ನಡುವೆ ಇದ್ದಂತಹ ಜನರ ನಡುವೆ ನೂಕಾಟ ಆಗಿದ್ದು ಆ ಸಮಯದಲ್ಲಿ ನನ್ನ ತಾಯಿ ಕಾಲ್ತುಳಿತಕ್ಕೆ ಒಳಗಾಗಿ ಮೃತಪಟ್ಟಿದ್ದು, ನಾನು ಹೇಳಿದಂತೆ ಬಸ್ಸುಗಳ ನಡುವೆ ಅವರು ಸಿಲುಕಿ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯವರ ತಪ್ಪಿನಿಂದಲೇ ಅವರು ಮೃತಪಟ್ಟಿದ್ದು, KSRTC Bus ಗಳ ನಡುವೆ ಸಿಲುಕಿ ಅವರು ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಬಸ್ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ವಯಸ್ಸಾಗಿದ್ದು ಅವರು ಜನದಟ್ಟಣೆಯ ನಡುವೆ ಎರಡು ಬಸ್‌ಗಳ ನಡುವೆ ಹೋಗಲು ಆಗದೇ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟರೇ ವಿಮೆ ಪರಿಹಾರ ಸಿಗುವುದಿಲ್ಲ ಎಂದು ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ.

**5.** ಎರಡೂ ವಾಹನಗಳ ನಡುವೆ ವ್ಯಕ್ತಿ ಸಿಕ್ಕಿಕೊಂಡರೆ ರಕ್ತಗಾಯಗಳಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನು ನೋಡಿದಾಗ ನನ್ನ ತಾಯಿಗೆ ರಕ್ತಗಾಯಗಳು ಆಗಿರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಒತ್ತಿದಂತಹ ಗಾಯಗಳು ಆಗಿದ್ದವು ಎನ್ನುತ್ತಾರೆ. ಒತ್ತಿದಂತಹ ಗಾಯ ಕಾಲ್ತುಳಿತದಿಂದ ಆಗಿರುತ್ತದೆ ಎಂದರೆ ಸುಳ್ಳು. ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**6.** ನಮ್ಮ ಊರಿನಲ್ಲಿ ಹಾಲಿನ ಡೈರಿ ಇರುತ್ತದೆ. ಸದರಿ ಡೈರಿಗೆ ನಾನು, ನನ್ನ ತಾಯಿ ಸದಸ್ಯರಾಗಿರುತ್ತೇವೆ. ಎಷ್ಟು ಹಾಲನ್ನು ಮಾರಿರುತ್ತೇವೆ ಎಂದು ತೋರಿಸಲು ಡೈರಿಯಿಂದ ದಾಖಲೆ ಪಡೆದು ಹಾಜರುಪಡಿಸಬಹುದೇ ಎಂದರೆ ಸಾಕ್ಷಿ ಕೇವಲ ಮತ ಚಲಾಯಿಸಲು ಮಾತ್ರ ಸದಸ್ಯರಾಗಿರುತ್ತೇವೆ ಎನ್ನುತ್ತಾರೆ. ಹಾಲು ಮಾರದೇ ಸದಸ್ಯನಾಗಲು ಅನುಮತಿ ಇಲ್ಲ ಎಂದರೆ ಸರಿಯಲ್ಲ. ಹಾಲನ್ನು ಹೋಟೆಲ್‌ಗಳು ಮತ್ತು ಅಂಗಡಿಗಳಿಗೆ ಮಾರಾಟ ಮಾಡಿದ್ದ ಬಗ್ಗೆ ಬಿಲ್ಲನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಳ್ಳಿಗಳಲ್ಲಿ ಆ ರೀತಿ ಬಿಲ್ಲುಗಳನ್ನು ಯಾರು ಕೊಡುವುದಿಲ್ಲ ಎನ್ನುತ್ತಾರೆ. ನನ್ನ ತಾಯಿ ಆ ರೀತಿ ಹಾಲನ್ನು ಹಾಕುತ್ತಿರಲಿಲ್ಲ ಹಾಗೂ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ನನಗೆ ಕಿಡ್ನಿಯ ಶಸ್ತ್ರಚಿಕಿತ್ಸೆಯಾಗಿದ್ದು, ನನ್ನ ಮನೆಗೆ ನನ್ನ ತಾಯಿಯೇ ಆಧಾರವಾಗಿದ್ದರು ಎನ್ನುತ್ತಾರೆ. ನಾನೇ ತಾಯಿಯನ್ನು ನೋಡಿಕೊಳ್ಳುತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಶಸ್ತ್ರಚಿಕಿತ್ಸೆ ಆಗಿರುವುದರಿಂದ ನಾನು ಕೆಲಸ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ನಾವು ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸದ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**7.** ಮೃತರ ಶವ ಸಾಗಾಣಿಕೆ, ಧಾರ್ಮಿಕ ಕಾರ್ಯ ಹಾಗೂ ಶವ ಸಂಸ್ಕಾರ ಇತ್ಯಾದಿಗಳಿಗಾಗಿ ರೂ.2,50,000/- ಗಳನ್ನು ಖರ್ಚು ಮಾಡಿದ ಬಗ್ಗೆ ನ್ಯಾಯಾಲಯಕ್ಕೆ

ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮಾಸಿಕವಾಗಿ ರೂ.30,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನನ್ನ ತಾಯಿಯನ್ನು ನಾನೇ ನೋಡಿಕೊಳ್ಳುತ್ತಿದ್ದರಿಂದ ಪರಿಹಾರ ಪಡೆಯಲು ಬಾಧ್ಯರಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2ನೇ ಎದುರುದಾರರ ಪರ ವಕೀಲರಿಂದ :**

2ನೇ ಎದುರುದಾರರ ಬಸ್ ನಿಲ್ದಾಣದಲ್ಲಿ ಬಂದು ನಿಂತಿತ್ತು ಎಂದರೆ ಸರಿ. ಅಪಘಾತ ಮಾಡಿದಂತಹ KA-40-F-1234 ರ ಬಸ್ ಮೇಲೆ ನಾನು ದೂರು ಕೊಟ್ಟಿರುತ್ತೇನೆ ಎಂದರೆ ಸರಿ. KA-06-F-1117 ರ ಬಸ್ ವಿರುದ್ಧ ಯಾವುದೇ ದೂರು ಕೊಟ್ಟಿರುವುದಿಲ್ಲ ಹಾಗೂ ಚಾಲಕನ ನಿರ್ಲಕ್ಷ್ಯತನ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**